# ನಿರ್ದೇಶಕರು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು ಇವರ ನಡವಳಿಗಳು

**ವಿಷಯ:** 2016–17ನೇ ಸಾಲಿನಲ್ಲಿ ಅಲ್ಪಸಂಖ್ಯಾತರ ಇಲಾಖಾ ವತಿಯಿಂದ ಕಾರ್ಯನಿರ್ವಹಿಸುತ್ತಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆ/ಪ.ಪೂ ಕಾಲೇಜು/ಮಾದರಿ ವಸತಿ ಶಾಲೆ(ನವೋದಯ) ನಿರ್ವಹಣೆಗೆ ಅನುದಾನವನ್ನು ಬಿಡುಗಡೆ ಮಾಡುವ ಕುರಿತು.

**ಉಲ್ಲೇಖ:** 1) ಸರ್ಕಾರಿ ಆದೇಶ ಸಂಖ್ಯೆ: ಎಂಡಬ್ಲೂಡಿ 124 ಎಂಡಿಎಸ್ 2016 ದಿನಾಂಕ: 16.04.2016.
2) ಸರ್ಕಾರಿ ಆದೇಶ ಸಂಖ್ಯೆ: ಎಂಡಬ್ಲೂಡಿ 124 ಎಂಡಿಎಸ್ 2016 ದಿನಾಂಕ: 03.05.2016

<><><>

**ಪ್ರ ಸ್ತಾ ವ ನೆ:–**

ಉಲ್ಲೇಖ (1)ರ ಸರ್ಕಾರಿ ಆದೇಶದಲ್ಲಿ 2015–16ನೇ ಸಾಲಿನಲ್ಲಿ ಚಾಲ್ತಿಯಲ್ಲಿರುವ ಯೋಜನೆಗಳನ್ನು 2016–17ನೇ ಸಾಲಿನವರೆಗೆ ಮುಂದುವರೆಸಲು ಆದೇಶಿಸಿದೆ. ಉಲ್ಲೇಖ (2)ರ ಸರ್ಕಾರಿ ಆದೇಶದಲ್ಲಿ ಅಲ್ಪಸಂಖ್ಯಾತರ ವಸತಿ ಶಾಲೆಗಳ ನಿರ್ವಹಣೆಗೆ ಮೊದಲನೇ ತ್ರೈಮಾಸಿಕ ಕಂತಾಗಿ ರೂ.3006.25 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ 53 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು, 5 ಮೊರಾರ್ಜಿ ದೇಸಾಯಿ ಪದವಿ ಪೂರ್ವ ಕಾಲೇಜು, 2 ಅಲ್ಪಸಂಖ್ಯಾತರ ಮಾದರಿ ವಸತಿ ಶಾಲೆ(ನವೋದಯ) ಒಟ್ಟು 60 ಅಲ್ಪಸಂಖ್ಯಾತರ ವಸತಿ ಶಾಲೆ/ಕಾಲೇಜುಗಳು ಕಾರ್ಯನಿರ್ವಹಿಸುತ್ತಿದ್ದು, ಇವುಗಳ ನಿರ್ವಹಣೆ, ಆಹಾರ ವೆಚ್ಚ, ಪಠ್ಯಪುಸ್ತಕ ಖರೀದಿ, 'ಡಿ' ವೃಂದದ ಸಿಬ್ಬಂದಿ ವೇತನ ಹಾಗೂ ಇತರೆ ವೆಚ್ಚಗಳ(ಶಾಲಾವಾರು ವೆಚ್ಚ ಹಾಗೂ ಅನುದಾನದ ವಿವರ ಪ್ರತ್ಯೇಕ ಅನುಬಂಧದಲ್ಲಿ ಕಳುಹಿಸಲಾಗಿದೆ) ನಿರ್ವಹಣೆಗೆ ಮೊದಲನೇ ತ್ರೈಮಾಸಿಕ ಕಂತಾಗಿ ಒಟ್ಟು ರೂ.395.40 ಲಕ್ಷ(ಮೂರು ನೂರ ತೊಂಭತ್ತೈದು ಲಕ್ಷದ ನಲವತ್ತು ಸಾವಿರ ರೂಗಳು ಮಾತ್ರ)ಗಳನ್ನು ಆಯಾ ಜಿಲ್ಲೆಯ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ/ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ರವರಿಗೆ ಅನುದಾನ ಬಿಡುಗಡೆ ಮಾಡಲು ನಿರ್ಧರಿಸಿದ್ದು ಅದರಂತೆ ಈ ಆದೇಶ.

**ಆದೇಶ**

**ಸಂಖ್ಯೆ: ಅಸಂನಿ/ಮೊದೇವಶಾ/ಅನುದಾನ/ಸಿಆರ್–04/2016–17** **ದಿನಾಂಕ: 06.06.2016**

ಪ್ರಸ್ತಾವನೆಗಳಲ್ಲಿ ವಿವರಿಸಿರುವ ಅಂಶಗಳನ್ನಾಧರಿಸಿ, ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ 53 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು, 5 ಮೊರಾರ್ಜಿ ದೇಸಾಯಿ ಪದವಿ ಪೂರ್ವ ಕಾಲೇಜು, 2 ಅಲ್ಪಸಂಖ್ಯಾತರ ಮಾದರಿ ವಸತಿ ಶಾಲೆ(ನವೋದಯ) ಒಟ್ಟು 60 ಅಲ್ಪಸಂಖ್ಯಾತರ ವಸತಿ ಶಾಲೆ/ಕಾಲೇಜುಗಳು ಕಾರ್ಯನಿರ್ವಹಿಸುತ್ತಿದ್ದು, ಕಾರ್ಯನಿರ್ವಹಿಸುತ್ತಿದ್ದು, ಇವುಗಳ ನಿರ್ವಹಣೆ, ಆಹಾರ ವೆಚ್ಚ, ಪಠ್ಯಪುಸ್ತಕ ಖರೀದಿ, 'ಡಿ' ವೃಂದದ ಸಿಬ್ಬಂದಿ ವೇತನ ಹಾಗೂ ಇತರೆ ವೆಚ್ಚಗಳ(ಶಾಲಾವಾರು ವೆಚ್ಚ ಹಾಗೂ ಅನುದಾನದ ವಿವರ ಪ್ರತ್ಯೇಕ ಅನುಬಂಧದಲ್ಲಿ ಕಳುಹಿಸಲಾಗಿದೆ) ನಿರ್ವಹಣೆಗೆ ಮೊದಲನೇ ತ್ರೈಮಾಸಿಕ ಕಂತಾಗಿ ಒಟ್ಟು **ರೂ.398.70 ಲಕ್ಷ(ಮೂರು ನೂರ ತೊಂಭತ್ತೆಂಟು ಲಕ್ಷದ ಎಪ್ಪತ್ತು ಸಾವಿರ ರೂಗಳು ಮಾತ್ರ)**ಗಳನ್ನು ಆಯಾ ಜಿಲ್ಲೆಯ **ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ/ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ರವರಿಗೆ** ಈ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟು ಅನುದಾನ ಬಿಡುಗಡೆ ಮಾಡಿದೆ.

**ನಿಬಂಧನೆಗಳು:–**

1) ಈ ಆದೇಶದಲ್ಲಿ ಬಿಡುಗಡೆ ಮಾಡಿರುವ ಅನುದಾನವನ್ನು ಕಡ್ಡಾಯವಾಗಿ 2016–17ನೇ ಸಾಲಿನ ವಸತಿ ಶಾಲೆಗಳ ಆಹಾರ ವೆಚ್ಚ, ಪಠ್ಯಪುಸ್ತಕ ಖರೀದಿ, ಸಿಬ್ಬಂದಿ ವೇತನ, ಹಾಗೂ ಇತರೆ ವೆಚ್ಚಗಳ ಬಿಲ್ಲುಗಳ ಪಾವತಿಗೆ ಮಾತ್ರ ಭರಿಸತಕ್ಕದ್ದು.(ಹಿಂದಿನ ವರ್ಷದ ಬಾಕಿ ಬಿಲ್ಲುಗಳನ್ನು ಭರಿಸುವಂತಿಲ್ಲ)
2) ಈ ಆದೇಶದಲ್ಲಿ ಬಿಡುಗಡೆ ಮಾಡಲಾದ ಅನುದಾನವನ್ನು ಯಾವ ಉದ್ದೇಶಕ್ಕೆ ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕೆ ಮಾತ್ರ ಬಳಸಿಕೊಳ್ಳತಕ್ಕದ್ದು, ಯಾವುದೇ ಕಾರಣಕ್ಕೂ ಅನುದಾನವನ್ನು ಮಾರ್ಗಪಲ್ಲಟ ಮಾಡುವಂತಿಲ್ಲ. ತಪ್ಪಿದ್ದಲ್ಲಿ ಮುಂದಿನ ಎಲ್ಲಾ ಆಗು ಹೋಗುಗಳಿಗೆ ತಮ್ಮನ್ನು ನೇರ ಹೊಣೆಗಾರನ್ನಾಗಿ ಮಾಡಲಾಗುವುದು.

3) ಬಿಡುಗಡೆ ಮಾಡಿರುವ ಅನುದಾನದಲ್ಲಿ ಭರಿಸಬೇಕಾದ ವೆಚ್ಚಗಳ ವಿವರ ಈ ಕೆಳಕಂಡಂತಿದೆ ಹಾಗೂ ಶಾಲಾವಾರು ವಿವರ ಜಿಲ್ಲೆ/ವಸತಿ ಶಾಲೆಗಳಿಗೆ ಪ್ರತ್ಯೇಕವಾಗಿ ಅನುಬಂಧದಲ್ಲಿ ಈ ಆದೇಶದೊಂದಿಗೆ ಲಗತ್ತಿಸಿ ಕಳುಹಿಸಲಾಗಿದೆ.

1. ಆಹಾರ ವೆಚ್ಚ(ಪ್ರತಿ ಮಾಹೆ, ಪ್ರತಿ ವಿದ್ಯಾರ್ಥಿಗೆ ಟೆಂಡರ್ ಕರೆದ ಜಿಲ್ಲೆಗಳಿಗೆ ರೂ.600/-ಗಳನ್ನು ತರಕಾರಿ ಹಾಗೂ ಇತರೆ ವೆಚ್ಚಗಳಿಗೆ ಬಿಡುಗಡೆ ಮಾಡಲಾಗಿದೆ. ರೂ.600/- ಗಳನ್ನು ತಕ್ಷಣಕ್ಕೆ ಕೆಡದ ಆಹಾರ ಪದಾರ್ಥಗಳ ಪಾವತಿಗೆ ಇರಿಸಿಕೊಳ್ಳಲಾಗಿದೆ).
2. ಹೊರಗುತ್ತಿಗೆ ಸಿಬ್ಬಂದಿಗಳ ಅಂದಾಜು ವೇತನ
   - ಏಪ್ರಿಲ್ 2016 ಮಾಹೆಯ ಕರ್ತವ್ಯದ ದಿನಗಳ ಹೊರಗುತ್ತಿಗೆ ಸಿಬ್ಬಂದಿಗಳ ವೇತನ
   - ಮೇ 2016 ಮಾಹೆಯ ಹೊರಗುತ್ತಿಗೆ ಕಾವಲುಗಾರರ ವೇತನ
   - ಜೂನ್ 2016 ಮಾಹೆಯ ಡಿ ವೃಂದದ ಹೊರಗುತ್ತಿಗೆ ಸಿಬ್ಬಂದಿಗಳ ವೇತನ
3. ಕಛೇರಿ (ಪೇಪರ್,ಸೀಮೆಸುಣ್ಣ, ಡೆಸ್ಟರ್ ಇತ್ಯಾಧಿ), ವಾರ್ತಾ ಪತ್ರಿಕೆ ಮತ್ತು ಗ್ರಂಥಾಲಯಕ್ಕೆ ಅಗತ್ಯ ವಸ್ತುಗಳ ಖರೀದಿ, ಪ್ರಯೋಗಾಲಯಕ್ಕೆ ಅಗತ್ಯ ವಸ್ತುಗಳ ಖರೀದಿ, ಕ್ರೀಡಾ ಮತ್ತು ಸಾಂಸ್ಕೃತಿಕ ವೆಚ್ಚ, ರಾಷ್ಟ್ರೀಯ ಹಬ್ಬಗಳ ದಿನಾಚರಣೆಯ ವೆಚ್ಚ, ವೈದ್ಯಕೀಯ ವೆಚ್ಚಗಳು 6 ತಿಂಗಳ ಅವಧಿಗೆ ಹಾಗೂ ಡ್ರಾಯಿಂಗ್ ವಸ್ತುಗಳ ಖರೀದಿ, ಪಠ್ಯಪುಸ್ತಕ ಶಿಕ್ಷಣ ಇಲಾಖೆಯಿಂದ ಪಡೆಯಲು, 6ನೇ ತರಗತಿ ವಿದ್ಯಾರ್ಥಿಗಳಿಗೆ ತಟ್ಟೆ, ಲೋಟ, ಟ್ರಂಕ್‌ಗಳ ಖರೀದಿಗೆ ವಾರ್ಷಿಕ ಮತ್ತು ಕಟ್ಟಡಗಳ ಸಣ್ಣಪುಟ್ಟ ರಿಪೇರಿ ವೆಚ್ಚಗಳಿಗೆ ತ್ರೈಮಾಸಿಕ ಅನುದಾನ ಬಿಡುಗಡೆಗೊಳಿಸಲಾಗಿದೆ.

4) ಈ ಆದೇಶದಲ್ಲಿ ಬಿಡುಗಡೆ ಮಾಡಿರುವ ಅನುದಾನ ಭರಿಸಿದ ವಿವರ ಪ್ರತಿ ತಿಂಗಳು 10ನೇ ತಾರೀಖಿನ ಒಳಗೆ (ಖಜಾನೆಯಿಂದ ಪಡೆದ 62ಬಿ ಪ್ರತಿಯೊಂದಿಗೆ) ನಿರ್ದೇಶನಾಲಯಕ್ಕೆ ಸಲ್ಲಿಸತಕ್ಕದ್ದು.

ಇದಕ್ಕೆ ತಗಲುವ ವೆಚ್ಚವನ್ನು ಆಬ್ಜೆಕ್ಟ್ ಕೋಡ್ (059) ಲೆಕ್ಕಶೀರ್ಷಿಕೆ 2225-03-277-2-80 ಅಲ್ಪಸಂಖ್ಯಾತರ ವಸತಿ ಶಾಲೆಗಳ ನಿರ್ವಹಣೆ ರಾಜ್ಯವಲಯ ಯೋಜನೆ 2016-17ನೇ ಸಾಲಿನಲ್ಲಿ ಒದಗಿಸಿರುವ ಆಯವಯ್ಯದಲ್ಲಿ ಭರಿಸುವುದು.

(ಅಕ್ರಂ ಪಾಷ)
ನಿರ್ದೇಶಕರು,
ಅಲ್ಪಸಂಖ್ಯಾತರ ನಿರ್ದೇಶನಾಲಯ,
ಬೆಂಗಳೂರು.

ಪ್ರತಿಯನ್ನು:-

1. ಕರ್ನಾಟಕ ಮಹಾಲೇಖಪಾಲರು, ಬೆಂಗಳೂರು
2. ಸರ್ಕಾರದ ಕಾರ್ಯದರ್ಶಿಗಳು, ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆ, ಬೆಂಗಳೂರು.
3. ಉಪ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವೆಚ್ಚ-3, ಬೆಂಗಳೂರು.
4. ಉಪ ನಿರ್ದೇಶಕರು, ಖಜಾನೆ ಗಣಕೀಕರಣ ಕೇಂದ್ರ, 2ನೇ ಮಹಡಿ, ಖನಿಜ ಭವನ, ಬೆಂಗಳೂರು.
5. ಸಂಬಂಧಪಟ್ಟ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ/ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಅಗತ್ಯಕ್ರಮಕ್ಕಾಗಿ ಹಾಗೂ ಪ್ರಾಂಶುಪಾಲರಿಗೆ (ಜಿಲ್ಲಾ ಅಧಿಕಾರಿಗಳ ಮೂಲಕ)
6. ಸಂಬಂಧಪಟ್ಟ ಜಿಲ್ಲಾ ಖಜಾನಾಧಿಕಾರಿಗಳು.
7. ಲೆಕ್ಕಪತ್ರ ಶಾಖೆ.
8. ಹೆಚ್ಚುವರಿ ಪ್ರತಿ/ಕಛೇರಿ ಪ್ರತಿ.